**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕಮಗಳೂರು.**

**ಸಿ.ಸಿ. ನಂ: 1723/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಡಾ.ಯಶಸ್ | ಪಿಡಬ್ಲ್ಯೂ- 7 |
| ತಂದೆಯ ಹೆಸರು | ಃ | ಲೇಟ್ ಧನಂಜಯ | ಸಿಡಬ್ಲ್ಯೂ- 15 |
| ವಯಸ್ಸು | ಃ | 30 ವರ್ಷ | |
| ಉದ್ಯೋಗ | ಃ | ಪಶು ವೈದ್ಯಾಧಿಕಾರಿಯಾಗಿದ್ದು, ರಾಜೀನಾಮೆ ಸಲ್ಲಿಸಿದ್ದು ಈಗ ಉನ್ನತ ವ್ಯಾಸಾಂಗ ಮಾಡುತ್ತಿದ್ದೇನೆ. | |
| ವಾಸ | ಃ | ಚಿಕ್ಕಮಗಳೂರು | |

ಪ್ರಮಾಣ ವಚನ ಭೋದಿಸಲಾದ ದಿನಾಂಕಃ **01.09.2025**

ಮುಖ್ಯ ವಿಚಾರಣೆಃ ಸ. ಸ. ಅ ರವರಿಂದ

ನಾನು ಫೆಬ್ರವರಿ 2021 ರಿಂದ ಮಾರ್ಚ್ 2023 ರವರೆಗೆ ಪಶು ವೈದ್ಯಾಧಿಕಾರಿಯಾಗಿ, ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ13.04.2022 ರಂದು ಚಾಸಾ.1 ರವರು ನನ್ನ ಮುಂದೆ ಒಂದು ರೆಡ್ ಸ್ಯಾಂಡ್ ಹಾವನ್ನು ಹಾಜರುಪಡಿಸಿದ್ದು, ಅದರ ಆರೋಗ್ಯ ಸ್ಥಿತಿ ಮತ್ತು ವೈಜ್ಞಾನಿಕ ಹೆಸರಿನ ಬಗ್ಗೆ ಮಾಹಿತಿಯನ್ನು ಕೇಳಿ ಮನವಿ ಸಲ್ಲಿಸಿದ್ದು, ನಾನು ಅದೇ ದಿನ ನನ್ನ ಕಚೇರಿಯಲ್ಲಿ ಚಾಸಾ.1 ರವರು ಹಾಜರುಪಡಿಸಿದ ಒಂದು ರೆಡ್ ಸ್ಯಾಂಡ್ ಹಾವನ್ನು ಹಾಜರುಪಡಿಸಿದ್ದು ನಾನು ಪರೀಶೀಲಿಸಿದಾಗ ಅದು ಬದುಕಿದ್ದು, ಅದರ ಆರೋಗ್ಯ ಸ್ಥಿತಿಯು ಉತ್ತಮವಾಗಿತ್ತು. ಅದು ಪೂರ್ತಿ ಬೆಳೆವಣಿಯಾದ ಹಾವಾಗಿದ್ದು ಅದರ ತೂಕವನ್ನು ಪರಿಶೀಲಿಸಿದಾಗ ಅದರ ತೂಕ 1.90 ಕೆ.ಜಿಯಾಗಿದ್ದು, ಉದ್ದ 1.27 ಮೀಟರ್, ತಲೆಯ ಬಳಿ ಸುತ್ತಳತೆ 28.83 ಎಂ ಎಂ, ಅದರ ಹೊಟ್ಟೆಯ ಭಾಗದ ಸುತ್ತಳತೆ 46.92 ಎಂ ಎಂ, ಬಾಲದ ಸುತ್ತಳತೆ 28.88 ಎಂ ಎಂ ಆಗಿತ್ತು. ಸದರಿ ಹಾವು ರೆಡ್ ಸ್ಯಾಂಡ್ ಹಾವು ಎಂದು ದೃಡೀಕರಿಸಿ, ದೃಡೀಕರಣವನ್ನು ಚಾಸಾ.1 ರವರಿಗೆ ನೀಡಿರುತ್ತೇನೆ. ಸದರಿ ಕವರಿಂಗ್ ಲೆಟರ್ ನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನಾನು ನೀಡಿದ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-

ಚಾಸಾ.1 ಹಾವನ್ನು ಪರಿಶೀಲಿಸಿ ವರದಿ ನೀಡುವಂತೆ ನನಗೆ ಮನವಿ ಪತ್ರ ಸಲ್ಲಿದ್ದರು.

ಹಾಗಾದರೆ ಸದರಿ ಮನವಿ ಪತ್ರದ ಪ್ರತಿಯನ್ನು ನೀಡಿದ್ದೀರಾ ಎಂದರೆ ಸಾಕ್ಷಿಯು ಮನವಿ ಪತ್ರವನ್ನು ಸ್ವೀಕರಿಸಿದ ತಕ್ಷಣ ಸಹಿ ಹಾಕಿ, ನಂತರ ಅವರಿಗೆ ವಾಪಸ್ಸು ನೀಡಿರುತ್ತೇನೆ ಎನ್ನುತ್ತಾರೆ. ರೆಡ್ ಸ್ಯಾಂಡ್ ಹಾವು ಸಣ್ಣ ಪುಟ್ಟ ರೆಪ್ಟೈಲ್ಸ್ ಮೊಲ ಮತ್ತು ಇಲಿಗಳನ್ನು ತಿಂದು ಬದುಕುತ್ತವೆ. ಸದರಿ ರೆಡ್ ಸ್ಯಾಂಡ್ ಹಾವು ಎಷ್ಟು ದಿನಗಳಿಂದ ಉಪವಾಸ ಇತ್ತು ಎಂದು ನಾನು ಹೇಳಲು ಆಗುವುದಿಲ್ಲ ಮತ್ತು ಹಿಂದಿನ ದಿನ ಏನು ತಿಂದಿತ್ತು ಎಂದು ಹೇಳಲು ಆಗುವುದಿಲ್ಲ. ಸದರಿ ಹಾವು ಊಟ ತಿಂದ ಬಗ್ಗೆ ಯಾವುದೇ ಪರೀಕ್ಷೆ ಮಾಡಿರುವುದಿಲ್ಲ. ಸದರಿ ರೆಡ್ ಸ್ಯಾಂಡ್ ಹಾವಿನ ವಯಸ್ಸನ್ನು ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿಯು ಆ ರೀತಿ ವಯಸ್ಸನ್ನು ಹೇಳಲು ಯಾವುದೇ ನಿರ್ದಿಷ್ಟ ಪರೀಕ್ಷೆ ಇಲ್ಲ, ಒಂದು ಹಾವನ್ನು ನೋಡಿದರೆ ಅದರ ಜೀವನ ಚಕ್ರ ಪರಿಗಣಿಸಿ, ಅದು ಮರಿಹಾವೇ ಅಥವಾ ಪೂರ್ತಿ ಬೆಳವಣಿಗೆಯಾಗಿದೆಯೇ ಎಂದು ಹೇಳಬಹುದು, ಅದು ಪೂರ್ತಿಯಾಗಿ ಬೆಳವಣಿಯಾಗಿತ್ತು. ರೆಡ್ ಸ್ಯಾಂಡ್ ಜಾತಿಯ ಹಾವುಗಳು ಒಂದೊಂದು ಒಂದೊಂದು ರೀತಿಯಲ್ಲಿ ಬೆಳವಣಿಯಾಗಿರುತ್ತದೆ ಎಂದರೆ ಸರಿ. ಸದರಿ ಹಾವು ಯಾವ ಲಿಂಗಕ್ಕೆ ಸೇರಿರುತ್ತದೆ ಎಂದು ನಾನು ಪರೀಕ್ಷೆ ಮಾಡಿಲ್ಲ. ಚಾಸಾ.1 ರವರ ಕೋರಿಕೆಯ ಮೇರೆಗೆ ಯಾವುದೇ ಹಾವನ್ನು ಪರಿಶೀಲಿಸದೇ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸ ಇ ಎ,

**sd/-**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಪ್ರ ದ ನ್ಯಾದಂ ., ಚಿಕ್ಕಮಗಳೂರು.